ಮೂಲ ದಾವಾ ಸಂಖ್ಯೆ.132/2016 ಡಿ ಡಬ್ಲ್ಯೂ 1

(ದಿನಾಂಕ 20-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಈ ದಾವೆ ಯಾವ ಹಂತದಲ್ಲಿದೆ ಅಂತಾ ನಿಮ್ಮ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ನನಗೆ ಹೇಳಲು ಬರುವುದಿಲ್ಲ. ನನ್ನ ಕನ್ನಡ ಭಾಷೆಯನ್ನು ಓದಲು ಬರೆಯಲು ಬರುವುದಿಲ್ಲ. ನಿಮ್ಮ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರವನ್ನು ಓದಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಸಹಿ ಮಾತ್ರ ಮಾಡಿದ್ದೇನೆ ಎನ್ನುತ್ತಾರೆ. ನಾನು ಓದಿ ಸಹಿ ಮಾಡಿರುವುದಿಲ್ಲ.

ನಾನು ಸೂರ್ಯಪ್ರಕಾಶರಾವ್ ರವರಿಂದ ನಮ್ಮ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನಾನು ಸನ್ 1988 ರಲ್ಲಿ ಖರೀದಿ ಮಾಡಿರುತ್ತೇನೆ ನಿಖರವಾದ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ನಾನು ಖರೀದಿಸಿದ ಆಸ್ತಿಯ ಸಂಪೂರ್ಣ ವಿಸ್ತೀರ್ಣ ಚದರಅಡಿಯಲ್ಲಿ ನನಗೆ ಹೇಳಲು ಬರುವುದಿಲ್ಲ. ಆಸ್ತಿ ಖರೀದಿ ಮಾಡಿದ 7-8 ವರ್ಷದಲ್ಲಿ ನಾನು ಸದರಿ ಆಸ್ತಿಯಲ್ಲಿ ಮನೆ ಕಟ್ಟಿರುತ್ತೇನೆ. ಹೆಂಚಿನ ಮನೆಯನ್ನು ಕಟ್ಟಿರುತ್ತೇನೆ. ನಾನು ಹೆಂಚಿನ ಮನೆ ಕಟ್ಟಿದ ನಂತರ ವಾದಿಯು ತನ್ನ ಆಸ್ತಿಯಲ್ಲಿ ಮನೆ ಕಟ್ಟಿರುತ್ತಾನೆಂದರೆ ಸಾಕ್ಷಿಯು ನಾನು ಮನೆ ಕಟ್ಟುವ ಪೂರ್ವದಲ್ಲಿ ಅವರು ಮನೆ ಕಟ್ಟಿರುತ್ತಾರೆನ್ನುತ್ತಾರೆ. ವಾದಿ ತನ್ನ ಆಸ್ತಿಯಲ್ಲಿ ಮನೆ ಕಟ್ಟುವಾಗ ನನ್ನ ಆಸ್ತಿಯಲ್ಲಿ ಯಾವುದೇ ಮನೆ ಇರಲಿಲ್ಲ ಅದು ಖಾಲಿ ಇತ್ತು. ನಾವು ಮೊದಲು ವಾದಿ ಮನೆ ಕಟ್ಟುವ ಸಮಯದಲ್ಲಿ ನಾವು ನಮ್ಮ ಸೈಟಿನ ಹತ್ತಿರದಲ್ಲಿ ಬಾಡಿಗೆ ಮನೆಯಲ್ಲಿದ್ದೆವು. ಆ ಸಮಯದಲ್ಲಿ ವಾದಿಯು ಪಾಯ ತೆಗೆಯುವುದನ್ನು ಮತ್ತು ಮನೆ ಕಟ್ಟುವುದನ್ನು ನಾನು ನೋಡಿರುತ್ತೇನೆ. ಆ ಸಮಯದಲ್ಲಿ ಕಾಂಪೌಂಡಿನ ಪಾಯವನ್ನು ತೆಗೆಯುವುದನ್ನು ಸಹಾ ನಾನು ನೋಡಿರುತ್ತೇನೆ. ಕಾಂಪೌಂಡ್ ಕಟ್ಟುವುದನ್ನು ನಾನು ಸಂಪೂರ್ಣವಾಗಿ ನೋಡಿರುತ್ತೇನೆ. ವಾದಿಯು ನನ್ನ ಜಾಗದಲ್ಲಿ ಅತಿಕ್ರಮಣ ಮಾಡಿ ಕಾಂಪೌಂಡ್ ಕಟ್ಟುತ್ತಿದ್ದಾರಂತಾ ಆ ಸಮಯದಲ್ಲಿ ನಾನು ತಕರಾರು ಅರ್ಜಿಯನ್ನು ಗ್ರಾಮ ಪಂಚಾಯ್ತಿಗೆ ನೀಡಿಲ್ಲ. ನಿಮ್ಮ ಜಾಗದಲ್ಲಿ ವಾದಿಯು ಅತಿಕ್ರಮಣ ಮಾಡಿ ಕಾಂಪೌಂಡ್ ಕಟ್ಟಿಲ್ಲ ಆ ಕಾರಣದಿಂದ ನೀವು ಅರ್ಜಿ ನೀಡಿಲ್ಲವೆಂದರೆ ಸಾಕ್ಷಿಯು ಅರ್ಜಿ ನೀಡಿಲ್ಲವೆನ್ನುತ್ತಾರೆ. ನಾವು ಮೌಖಿಕವಾಗಿ ಪುರಸಭೆಗೆ ತಿಳಿಸಿರುತ್ತೇವೆ. ನಾನು ಆಸ್ತಿ ಖರೀದಿ ಮಾಡಿದಾಗ ಗ್ರಾಮ ಪಂಚಾಯ್ತಿ ಇತ್ತು. ವಾದಿಯು ಆಸ್ತಿ ಖರೀದಿ ಮಾಡಿದಾಗ ಗ್ರಾಮ ಪಂಚಾಯ್ತಿ ಇತ್ತು. ವಾದಿಯು ಮನೆ ಕಟ್ಟುವಾಗ ಗ್ರಾಮ ಪಂಚಾಯ್ತಿ ಇತ್ತು. ವಾದಿಯು ನಮ್ಮ ಆಸ್ತಿಯಲ್ಲಿ ಮನೆ ಕಟ್ಟುತ್ತಿದ್ದಾರಂತಾ

ಗ್ರಾಮ ಪಂಚಾಯ್ತಿಗೆ ಲಿಖಿತವಾಗಿ ತಕರಾರು ಅರ್ಜಿ ನೀಡಿಲ್ಲ. ವಾದಿಯು ಮನೆ ಕಟ್ಟಿದ ಎಷ್ಟು ವರ್ಷಕ್ಕೆ ಪುರಸಭೆ ಸ್ಥಾಪನೆಯಾಯಿತು ಎಂದರೆ ಸಾಕ್ಷಿಯು ಈಗ 8 ವರ್ಷದ ಹಿಂದೆ ಪುರಸಭೆಯಾಯಿತು ಎನ್ನುತ್ತಾರೆ. ವಾದಿಯು ಸನ್ 1988 ರಲ್ಲಿ ಆಸ್ತಿ ಖರೀದಿ ಮಾಡಿದ ತಕ್ಷಣ ಮನೆ ಕಟ್ಟುವುದನ್ನು ಪ್ರಾರಂಭಿಸಿರುತ್ತಾರೆ. ವಾದಿಯು ಮನೆ ಕಟ್ಟಿ ಸುಮಾರು 20-25 ವರ್ಷವಾದರೂ ಸಹಾ ನೀವು ತಕರಾರು ಮಾಡಿಲ್ಲವೆಂದರೆ ಸರಿಯಲ್ಲ. ನಾವು ತದರಿ ತಕರಾರನ್ನು ವಾದಿ ಜೊತೆ ಮಾತ್ರ ಮಾಡಿರುತ್ತೇವೆ. ವಾದಿಯು ಅತಿಕ್ರಮಣ ಮಾಡಿ ಮನೆ ಕಟ್ಟಿರುವ ಬಗ್ಗೆ ನಾವು ಅವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ನೀಡಿಲ್ಲ ಮತ್ತು ಸಂಬಂಧಿಸಿದ ಇಲಾಖೆಗೆ ತಕರಾರುಗಳನ್ನು ಸಲ್ಲಿಸಿರುವುದಿಲ್ಲ. ನಾವು ವಾದಿಗೆ ತಕರಾರು ಮಾಡಿರುತ್ತೇವಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸನ್ 1988 ರಲ್ಲಿ ಆಸ್ತಿ ಖರೀದಿಸಿದಾಗ ನನ್ನ ಸೈಟಿನ ಸರ್ವೆಯನ್ನು ಮಾಡಿಸಿರುತ್ತೇನೆ. ಸರ್ವೆ ಮಾಡಲು ಸಕ್ರಗೌಡರವರು ಬಂದಿದ್ದರು. ಸದರಿಯವರು ಸರ್ವೆ ಮಾಡಿದ ಬಗ್ಗೆ ಯಾವುದೇ ವರದಿ ಕೊಟ್ಟಿಲ್ಲ. ನಾವು ಆ ದಿನ ಯಾವುದೇ ಸರ್ವೆ ಮಾಡಿಸಿಲ್ಲ, ಸರ್ವೆ ಮಾಡಿಸಿರುತ್ತೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಸೈಟಿನ ಪಕ್ಕ ಟಿ ಜಿ ಎಂ ಕೊಟ್ರೇಶ್ ಎನ್ನುವವರು ಒಂದು ಸೈಟು ಖರೀದಿ ಮಾಡಿರುತ್ತಾರೆಂದರೆ ಸರಿ. ನನ್ನ ಆಸ್ತಿಯ ದಕ್ಷಿಣ ಭಾಗಕ್ಕೆ ವಾದಿಯ ಮನೆ ಇದೆ, ವಾದಿಯ ಮನೆಯ ದಕ್ಷಿಣ ಭಾಗಕ್ಕೆ ಟಿ ಜಿ ಎಂ ಕೊಟ್ರೇಶ್ ಇವರ ಸೈಟು ಇದೆ. ಟಿ ಜಿ ಎಂ ಕೊಟ್ರೇಶ್ ಮತ್ತು ವಾದಿ ಸೇರಿ ಹುದುವಿನ ಗೋಡೆ ಸಂಬಂಧ ಒಂದು ಕರಾರು ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ಹುದುವಿನ ಗೋಡೆ ಪ್ರಕಾರ ಅಳತೆ ಮಾಡಿದರೆ ವಾದಿಯು ನಮ್ಮ ಆಸ್ತಿಯಲ್ಲಿ ಅತಿಕ್ರಮಣ ಮಾಡಿಲ್ಲವೆಂದರೆ ಸರಿಯಲ್ಲ.

ನನಗೆ ಮನೆ ಕಟ್ಟಲು ಗ್ರಾಮ ಪಂಚಾಯ್ತಿಯವರು ಲೈಸನ್ಸ ನೀಡಿದ್ದಾರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಸೈಟಿನ ಅಳತೆ 21 ಅಡಿ ಅಗಲ x 51 ಅಡಿ ಉದ್ದ ಇರುತ್ತದೆ. ಸದರಿ ಸೈಟಿನಲ್ಲಿ 16 ಅಡಿ x 32 ಅಡಿ ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತೇನೆ. ಸದರಿ ಅಳತೆಯು ಮನೆಯ ಒಳಗಿನ ಅಳತೆಯಾಗಿರುತ್ತದೆ. ಗ್ರಾಮ ಪಂಚಾಯ್ತಿಯವರು ಕಟ್ಟಡ ಕಟ್ಟಲು ಪರವಾನಿಗೆ ನೀಡಿದಾಗ ಏನೇನು ಷರತ್ತುಗಳು ಹಾಕಿದ್ದರೆನ್ನುವುದು ನನಗೆ ಹೇಳಲು ಬರುವುದಿಲ್ಲ. ನಮ್ಮ ಮನೆಯ ಹೊರಗೋಡೆಯ ಎರಡೂ ಗೋಡೆ 14 ಇಂಚಿನ ಗೋಡೆಯಾಗಿರುತ್ತದೆ. ಸದರಿ ಲೈಸನ್ಸ ನಿಡಿ-11 ರಲ್ಲಿ ಕರಾರು ನಂ.1(ಕ) ದಲ್ಲಿ ಪ್ರತಿಯೊಂದು ಭಾಗಗಳಲ್ಲೂ ಕನಿಷ್ಠ 5 ಅಡಿ ಅಂಚುಳ್ಳ ಖಾಲಿ ಜಾಗ ಇರುವಂತೆ ಏರ್ಪಡಿಸತಕ್ಕದ್ದು ಮತ್ತು ಅವುಗಳನ್ನು ರಕ್ಷಿಸಿಕೊಂಡು

ಬರತಕ್ಕದ್ದು ಅಂತಾ ಕರಾರು ವಿಧಿಸಿದ್ದು ಇದೆ ಎಂದರೆ ಸರಿ. ನಾವು ಉತ್ತರ ದಿಕ್ಕಿಗೆ ಉಮಾಪತಿರವರ ಮನೆ ಕಡೆಗೆ 2 ಅಡಿ ಜಾಗವನ್ನು ಬಿಟ್ಟಿರುತ್ತೇವೆ. ದಕ್ಷಿಣದ ಕಡೆಗೆ 3 ಅಡಿ ಜಾಗವನ್ನು ಬಿಟ್ಟಿರುತ್ತೇವೆ. ನಾವು ದಕ್ಷಿಣ ಕಡೆಗೆ 3 ಅಡಿ ಜಾಗವನ್ನು ಬಿಟ್ಟಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಾಂಪೌಂಡಿನಿಂದ ಅರ್ಧ ಅಡಿ ಜಾಗವನ್ನು ಬಿಟ್ಟು ನಾವು ಮನೆ ಕಟ್ಟಿರುತ್ತೇವೆಂದರೆ ಸರಿಯಲ್ಲ. ನಿಡಿ-20 ಮತ್ತು 28 ದಾಖಲೆಗಳು ನಮ್ಮ ಮನೆ ಕಟ್ಟುತ್ತಿರುವ ಫೋಟೋ ಆಗಿರುತ್ತದೆಂದರೆ ಸರಿ. ಸದರಿ ಫೋಟೋಗಳಲ್ಲಿ 1 ರಿಂದ 1ವರೆ ಅಡಿ ಜಾಗವನ್ನು ಮಾತ್ರ ಬಿಟ್ಟಿರುತ್ತೇವಂತಾ ತೋರಿಸುತ್ತದೆಂದರೆ ಸರಿಯಲ್ಲ.

ಈಗ ಸಾಕ್ಷಿ ನುಡಿಯಲು ಬಂದಿರುವ ಸಾಕ್ಷಿದಾರರಾದ ಜಿ ಯಮನೂರ್ ಇವರು ನಮ್ಮ ಮನೆಯ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರು ನಮ್ಮ ಮನೆಗೆ ಬೇಲ್ದಾರ್ ಕೆಲಸ ಮಾಡಲು ಬರುತ್ತಿದ್ದರು ಎಂದರೆ ಸರಿ. ಅವರು ಹಳೇ ಮನೆ ಇದ್ದಾಗಿನಿಂದಲೂ ಅವರು ಸದರಿ ಕೆಲಸಕ್ಕೆ ಬರುತ್ತಿದ್ದರು ಎಂದರೆ ಸರಿ, ಅವರು ಮತ್ತು ನಾವು ಬಹಳ ಆತ್ಮೀಯರು ಎಂದರೆ ಸರಿ. ನಾವು ಹೇಳಿದ ಮಾತುಗಳನ್ನು ಅವರು ಕೇಳುತ್ತಾರೆಂದರೆ ಸರಿ. ಆ ಕಾರಣದಿಂದಾಗಿ ಅವರನ್ನು ಈ ದಾವೆಯಲ್ಲಿ ಸುಳ್ಳು ಸಾಕ್ಷಿ ಮಾಡಿಸಿರುತ್ತೇನೆಂದರೆ ಸರಿಯಲ್ಲ. ವಾದಿಯು ನಮ್ಮ ಯಾವುದೇ ಆಸ್ತಿಯನ್ನು ಅತಿಕ್ರಮಣ ಮಾಡಿಲ್ಲ, ಅವರ ವಿರುದ್ದ ನಾನು ವಿನಾಕಾರಣ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕಟ್ಟಡ ಕಟ್ಟಲು ನೀಡಿರುವಂತಹ ಲೈಸನ್ಸನ ಷರತ್ತುಗಳನ್ನು ನಾನು ಉಲ್ಲಂಘನೆ ಮಾಡಿರುತ್ತೇನೆ ಅಧಿಕಾರಿಗಳು ಅದರ ಬಗ್ಗೆ ನಮ್ಮ ವಿರುದ್ಧ ಕ್ರಮ ಜರುಗಿಸಬಹುದೆನ್ನುವ ಕಾರಣಕ್ಕೆ ವಾದಿಯ ವಿರುದ್ದ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ